ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಇಲ್ಲ ಎಂದು ಹೇಳಿದರೆ ಮುಂದಿನ ವಾರದಿಂದ ಮಂಗಳೂರಿನಲ್ಲಿ ರೈಲ್ವೆ ನಿಲ್ದಾಣದಲ್ಲಿ ನಾನು ಚಳುವಳಿಯನ್ನು ಪ್ರಾರಂಭ ಮಾಡುತ್ತಿದ್ದೇನೆ. ಇದನ್ನು ತಮ್ಮ ಮೂಲಕ ಸರ್ಕಾರಕ್ಕೆ ಸ್ಪಷ್ಟವಾಗಿ ನಾನು ತಿಳಿಸುತ್ತಿದ್ದೇನೆ. ದಯಮಾಡಿ ಈ ಬಗ್ಗೆ ಕೂಡಲೇ ರೈಲ್ವೆ ಸಚಿವರ ಹತ್ತಿರ ಮಾತನಾಡಿ ಈ ಅನಾನುಕೂಲ ತಪ್ಪಿಸಿ ಕನ್ನಡಿಗರಿಗೆ ಅಂಗಡಿಗಳನ್ನು ಕೊಡಬೇಕು. ಕನ್ನಡದವರಿಗೇ ಹೋಟಿಲುಗಳನ್ನು ಕೊಡಬೇಕು. ಉದ್ಯೋಗವನ್ನು ಕನ್ನಡಿಗರಿಗೇ ಕೊಡಬೇಕು ಎನ್ನತಕ್ಕ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿ ತಕ್ಷಣ ಈ ಸದನ ಏಳುವುದರೊಳಗಾಗಿ ಅಂದರೆ ಮುಂದಿನ ಸೋಮವಾರದೊಳಗೆ ರೈಲ್ವೆ ಸಚಿವರ ಜೊತೆ ಮಾತನಾಡಿ ತಾವು ಏನು ಹೇಳುತ್ತೀರಿ ಎನ್ನುವ ಬಗ್ಗೆ ಈ ಸದನಕ್ಕೆ ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್ : ಸನ್ಮಾನ್ಯ ಅಧ್ಯಕ್ಷರೆ, ರೈಲ್ವೆ ಇಲಾಖೆಯಲ್ಲಿ ಕನ್ನಡಿಗಿರಿಗೆ ಅನ್ಯಾಯವಾಗಿದೆ.

ಅಧ್ಯಕ್ಷರು : ಈ ವಿಷಯವನ್ನು ಪ್ರಸ್ತಾಪಮಾಡುವುದಕ್ಕೆ, ಶೂನ್ಯ ವೇಳೆಯಲ್ಲಿ ಇದನ್ನು ತೆಗೆಯುತ್ತೇನೆ ಎಂದು ಬಂದು ನನ್ನ ಅನುಮತಿಯನ್ನು ಪಡೆದು ಇಲ್ಲಿ ಪ್ರಸ್ತಾಪ ಮಾಡಿದರು. ತಾವು ಯಾರು ಅಲ್ಲಿ ಬರುವುದಿಲ್ಲ, ಅದರ ಕಡೆ ಗಮನ ಕೊಡುವುದಿಲ್ಲ. ಇಲ್ಲಿ ಅವರು ಹೇಳಿದಮೇಲೆ ಎಲ್ಲರೂ ಎದ್ದುನಿಂತುಕೊಂಡರೆ ಶೂನ್ಯ ವೇಳೆಯಲ್ಲಿ ಡಿಸ್ಕಷನ್ ಇಟ್ಟುಕೊಳ್ಳುವುದಕ್ಕಾಗುತ್ತದೆಯೇ ಕುಳಿತುಕೊಳ್ಳಿ ದಯಮಾಡಿ. ಸೀರಿಯಸ್‌ನೆಸ್ ಇದ್ದರೆ ಮೊದಲೇ ಬಂದು ತಿಳಿಸಬೇಕು. ಅಥವಾ ಬೇರೆ ರೂಪದಲ್ಲಿ ತನ್ನಿ. ಉತ್ತರ ಕೊಡುತ್ತಾರೆ. ಈಗ ದಯಮಾಡಿ ಕುಳಿತುಕೊಳ್ಳಿ.

ಕುಂದಾಪುರ ತಾಲ್ಲೂಕು ಎಡ್ಯಾಡಿ, ಮತ್ಯಾಡಿ ಗ್ರಾಮದ ಗುಡ್ಡೆಟ್ಟು ಎಂಬ ಸ್ಥಳದಲ್ಲಿ ಅಕ್ರಮ ಶರಾಬು

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ಅಧ್ಯಕ್ಷರೆ ಸನ್ಮಾನ್ಯ ಸದಸ್ಯರು ಹೇಳಿರತಕ್ಕಂತಹ ವಿಷಯವನ್ನು ಬಹಳ ಗಂಭೀರತೆಯಿಂದ ನಾವು ಪರಿಶೀಲಿಸುತ್ತೇವೆ ಸಾಧ್ಯವಾದರೆ, ಒಂದೆರಡು ದಿವಸಗಳೊಳಗೆ ರೈಲ್ವೆ ಮಂತ್ರಿಗಳ ಜೊತೆ ಸಂಪರ್ಕ ಮಾಡಿ, ಈ ರೀತಿ ಕನ್ನಡಿಗಿರಗೆ ಅನ್ಯಾಯವಾಗುತ್ತದದೆತ ಏಕೆಂದರೆ ರೈಲ್ವೇ ಮಂತ್ರಿಗಳು ಕರ್ನಾಟಕದವರು, ಅವರ ಗಮನ ಸೆಳೆಯುತ್ತೇನೆ. ಈ ಬಗ್ಗೆ ಸರಿಪಡಿಸುವುದಕ್ಕೂ ಕೇಳಿಕೊಳ್ಳುತ್ತೇನೆ. ಅಲ್ಲಿಗೂ ಅವರು ಸರಿ ಮಾಡದಿದ್ದರೆ ಏಕೆಂದರೆ, ಆಫೀಸರ್ಸ್ ಲೆವಲ್‌ನಲ್ಲಿ ಏನೇನು ನಡೆದಿರುತ್ತದೆಯೋ ಗೊತ್ತಿಲ್ಲ, ಅಲ್ಲಿಗೂ ಅದು ಸರಿ ಹೋಗಲಿಲ್ಲ ಅಂದರೆ, ಮಾನ್ಯ ಸದಸ್ಯರು ಚಳುವಳಿ ಮಾಡುವುದು ಸರಿ.

ಗಮನ ಸೆಳೆಯುವ ಸೂಚನೆಗಳು

ಕುಂದಾಪುರ ತಾಲ್ಲೂಕು ಎಡ್ಯಾಡಿ, ಮತ್ಯಾಡಿ ಗ್ರಾಮದ ಗುಡ್ಡೆಟ್ಟು ಎಂಬ ಸ್ಥಳದಲ್ಲಿ ಅಕ್ರಮ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕು ಎಡ್ಯಾಡಿ, ಮತ್ಯಾಡಿ ಗ್ರಾಮಗಳಲ್ಲಿ ಅಕ್ರಮ ದೊರೆಯುತ್ತಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಕೊಡುತ್ತೇನೆ.

ದಿನಾಂಕ: 24-3-95 ರಂದು ಖಚಿತ ವರ್ತಮಾನ ಬಂದ ಮೇಲೆ ಅಬಕಾರಿ ನಿರೀಕ್ಷಕರು, ಕುಂದೂಪುರ ವಲಯ ಮತ್ತು ಅವರ ಸಿಬ್ಬಂದಿಯವರು ಕುಂದಾಪುರ ತಾಲ್ಲೂಕಿನ ಎಡ್ಯಾಡಿ, ಮುತ್ಯಾಡಿ ಗ್ರಾಮದ ವೈ. ಕರುಣಾಕರ ಶೆಟ್ಟಿ ಎಂಬುವವರ ತೆಂಗಿನ ತೋಟದಲ್ಲಿರುವ ಪಂಪ್ ಹೌಸ್‌ನಲ್ಲಿ ಅಕ್ರಮವಾಗಿ ಶರಾಬು ಸ್ಯಾಚೆಟ್‌ಮಾಡಲು ಯಂತ್ರ ಸಾಮಗ್ರಿಗಳನ್ನು ಮತ್ತು ಶರಾಬು ಶೇಖರಣೆ ಗೋಸ್ಕರ ಹಲವಾರು ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಆಳವಡಿಸಿರುವವರೆಂಬ ಬಾತ್ಮಿಯ ಮೇರೆಗೆ ಈ ಸ್ಥಳವನ್ನು ಆ ದಿನ ಸಂಜೆ 6-00ಕ್ಕೆ ಶೋಧನೆ ಮಾಡಿದಾಗ ಅಕ್ರಮವಾಗಿಕ 4,000ಲೀಟರ್ ಮದ್ಯಸಾರವನ್ನು ಶೇಖರಿಸಿದ್ದು ಮತ್ತು ಶರಾಬನ್ನು ಪ್ಯಾಕೆಟ್ ಮಾಡಲು ಉಪಯೋಗಿಸುವ ಯಂತ್ರ ಮತ್ತು ಸಲಕರಣೆಗಳು ಇದ್ದಿದ್ದು ಪತ್ತೆಯಾಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆ 1966 ಕಲಂ 13ರ ಉಲ್ಲಂಘನೆಯಾಗಿದ್ದು ಕಲಂ 32 ಮತ್ತು 38 ಎಪ್ರಕಾರ ಶಕ್ಷಾರ್ಹ ಅಪರಾಧವಾಗಿರುವುದರಿಂದ, ಅಬಕಾರಿ ನೀರಿಕ್ಷಕರು ಪ್ರಥಮ ಮಾಹಿತಿ ವರದಿಯನ್ನು -ಅನಿ : ಕೆಎನ್‌ಡಿ: ಎಫ್‌ಐಆರ್ 29:94-95, ದಿನಾಂಕ:24-3-95 ರಂದು ದಾಖಲಿಸಿದ್ದಾರೆ.

ಆರೋಪಿ 1 ಪತ್ತೆಯಾಗಿರುವುದಿಲ್ಲ, ಆರೋಪಿ-2 ಶ್ರೀ ವೈ.ಕೆ. ಕರುಣಾಕರಕ ಶೆಟ್ಟಿ ಕಟ್ಟಡದ ಮಾಲೀಕರು, ಎಡ್ಯಾಡಿ, ಮುತ್ಯಾಡಿ ಗ್ರಾಮ ಕುಂದಾಪುರ ತಾಲ್ಲೂಕುರವರ ವಿರುದ್ಧ ಮೇಲಿನ ಮೊಕದ್ದಮೆಯನ್ನು ದಾಖಲು ಮಾಡಿ, ಈ ಕೆಳಕಂಡ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.

1) ಶರಾಬು ಪ್ಯಾಕೇಟು ಮಾಡುವ ಯಂತ್ರ 1

2) ಸ್ಪೆಬಿಲೈಸರ್ 1

3) ಎಲೆಕ್ಟ್ರಿಕ್ ಮೋಟಾರ್ 1 ಎಚ್‌ಪಿ 1

4) ಪ್ಲಾಸ್ಟಕ್ ರೀಲ್ 1

4) 1,000 ಲೀ ಅಳತೆಯ 4 ಸಿಂಟೆಕ್ಸ್‌ಟ್ಯಾಂಕ್‌ಗಳಲ್ಲಿ (ತಲಾ 500ಲೀ ಯಂತೆ 2000ಲೀ) ಮದ್ಯಸಾರ

5) 500 ಲೀಟರ್ ಅಳತೆಯ 4 ಸಿಂಟೆಕ್ಸ್ ಟ್ಯಾಂಕ್‌ಗಳಲ್ಲಿ ತಲಾ 400ಲೀ ಯಂತೆ 1600 ಲೀ ಮದ್ಯಸಾರ

6) 500 ಲೀಟರ್ ಅಳತೆಯ 1 ಸಿಂಟೆಕ್ಸ್ ಟ್ಯಾಂಕುನಲ್ಲಿ 300ಲೀ ಮದ್ಯಸಾರ

7) 500ಲೀಟರ್ ಅಳತೆಯ 1 ಸಿಂಟೆಕ್ಸ್ ಟ್ಯಾಕುನಲ್ಲಿ 100 ಲೀ ಮದ್ಯಸಾರ

8) 35 ಲೀಟರ್ ಅಳತೆಯ 59 ಪ್ಲಾಸ್ಟಿಕ್ಸ್ ಕ್ಯಾನ್‌ಗಳು (ಖಾಲಿ)

9) 50 ಲೀಟರ್ ಅಳತೆಯ 1 ಪ್ಲಾಸ್ಟಕ್ ಖಾಲಿ ಕ್ಯಾನ್‌ಗಳು.

ಶ್ರೀ ವೈ ಕರುಣಾಕರ ಶಟ್ಟಿ ಕಟ್ಟಡದ ಮಾಲೀಕಕರ ಹೇಳಿಕೆಯ ಪ್ರಕಾರ ಸದರಿ ಮದ್ಯಸಾರ ಮತ್ತು ಸ್ಯಾಚೆಟ್ ಮಾಡುವ ವಸ್ತುಗಳ ಶ್ರೀಧರ್ ಗಣಿಗೆ, ಉಪ್ಪುಂದರವರದೆಂದು ಮತ್ತು ಸದರಿ ಕಟ್ಟಡವನ್ನು ಅವರಿಗೆ ಬಾಡಿಗೆಗಾಗಿ ಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ.

ಆರೋಪಿ : 1: ಶ್ರೀಧರ್ ಗಾಣಿಗರವರನ್ನು ಪತ್ತೆ ಹಚ್ಚಬೇಕಾಗಿದೆ. ಮತ್ತು ಅಬಕಾರಿ ಇಲಾಖೆಯವರು ಈ ದಿಸೆಯಲ್ಲಿ ತನಿಖೆ ಪರಿಶೋಧನೆ ಮುಂದುವರಿಸಿದ್ದಾರೆ. ಆರೋಪಿ-2 ವೈ. ಕರುಣಾಕರ ಶೆಟ್ಟಿಯವರನ್ನು ದಿನಾಂಕ 27-3-95ರಂದು ದಸ್ತಗಿರಿ ಮಾಡಿ ಅಬಕಾರಿ ಕಾಯಿದೆಯನ್ವಯ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆಂದು ತಿಳಿದು ಬಂದಿದೆ.

ಯಡ್ಯಾಪಿ, ಮತ್ಯಾಡಿ, ಗ್ರಾಮದಲ್ಲಿ ಇತ್ತೀಚಿಗೆ ನಡೆದ ಅಬಕಾರಿ ದಾಳಿಯಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಪೋಲೀಸ್ ಸಹಾಯವನ್ನು ನೀಡಲಾಗಿದೆ. ಅಬಕಾರಿ ಕಾಯಿದೆ ಅಡಿಯಲ್ಲಿ ಅಬಕಾರಿ ಇಲಾಖೆಯು ಈ ಕ್ರಮ ಕೈಗೊಂಡಿದೆ.

ಕೊಲೆ, ಸುಲಿಗೆ, ಹಲ್ಲೆ ಹಾಗೂ ಗುಂಪು ಘರ್ಷಣೆ, ಪ್ರಮುಖ ಘಟನೆಗಳು ಕುಂದಾಪುರ ತಾಲ್ಲೂಕಿನಿಂದ ವರದಿ ಆಗಿರುವುದಿಲ್ಲ. ವಿಧಾನ ಸಭೆ ಅಥವಾ ಪಂಚಾಯತ್ ಚುನಾವಣೆಗಳಲ್ಲಿ ಕೂಡ ಯಾವುದೇ ಘಟನೆ ವರದಿಯಾಗಿರುವುದಿಲ್ಲ. ರೌಡಿ ಚಟುವಟಿಕೆಗಳ ಬಗ್ಗೆಯೂ ದೂರು ಇರುವುದಿಲ್ಲ. ಕಾನೂನು ಸುವ್ಯವಸ್ಥೆ ಮತ್ತು ಅಪರಾಧ ಪರಿಸ್ಥಿತಿ ಸುಧಾರಿಸಿದ್ದು ಸಾರ್ವಜನಿಕರಿಂದ ಯಾವುದೇ ದೂರು ಬಂದಿರುವುದಿಲ್ಲ.

ಕಳೆದ 6 ತಿಂಗಳುಗಳಿಂದ ಪ್ರಮುಖ ಅಪರಾಧಗಳ ಮೇಲೆ ಪೋಲೀಸರು ಕ್ರಮಬದ್ಧವಾಗಿ ಕಾನೂನಿನ ಕ್ರಮ ಕೈಗೊಂಡಿದ್ದು ಅದರ ವಿವರ ಈ ರೀತಿ ಇದೆ.

ಮಟ್ಕಾ-ಜೂಜು ಪ್ರಕರಣಗಳು	38
(ಕುಂದಾಪುರ ತಾಲ್ಲೂಕ್)	
107 ಸಿ. ಆರ್. ಪಿ. ಸಿ. ಪ್ರಕರಣಗಳು	8
(ಕುಂದಾಪುರ ತಾಲ್ಲೂಕ್)	

ಇತ್ತೀಚಿಗೆ 6ರೌಡ ಶೀಟ್‌ಗಳನ್ನು ತೆರೆಯಲಾಗಿದ್ದು ಎಚ್ಚರಿಕೆಯಿಂದ ಗಮನಿಸಲಾಗುತ್ತಿದೆ. ಆದ್ದರಿಂದ ರೌಡಿ-ಗೂಂಡಾಗಳ ಚಟುವಟಿಕೆ ತೀವ್ರವಾಗಿದೆ ಎಂಬುದು ಸರಿಯಲ್ಲ. ಇತ್ತೀಚಿಗೆ ರಚಿಸಲಾದ ಜಿಲ್ಲಾ ರೌಡಿ ದಳ ಜಿಲ್ಲೆಯಲ್ಲಿ 30 ಜನ . ರೌಡಿಗಳ ಮೇಲೆ ತೀವ್ರ ಕ್ರಮ ಕೈಗೊಂಡು ಹಲವಾರು ಶಸ್ತ್ರಾಗಳನ್ನು ವಶಪಡಿಸಿಕೊಂಡಿದೆ. ಜಿಲ್ಲಾ ಅಪರಾಧ ದಳ ಕಳೆದ 3 ತಿಂಗಳಲ್ಲಿ 50 ಪ್ರಕರಣಗಳನ್ನು ಪತ್ತೆ ಹಚ್ಚಿ 11ಲಕ್ಷಕ್ಕೂ ಅಧಿಕ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಂಡಿದೆ. ಇತ್ತೀಚಿಗೆ ಕುಂದಾಪುರ ತಾಲ್ಲೂಕಿನಲ್ಲಿ ಹುಬ್ಬಳ್ಳಿಯ ಅಂತರ ಜಿಲ್ಲಾ ಡಕಾಯಿತಿ ತಂಡವನ್ನು ಬಂಧಿಸಿ ಹಳೆಯ ಮನೆಗಳ್ಳತನದ ಪ್ರಕರಣಗಳನ್ನು ಪತ್ತೆ ಹಚ್ಚಿದೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ನಮ್ಮ ವ್ಯವಸ್ಥೆಗಳನ್ನು ನಾವು ನೋಡುತ್ತಿರತಕ್ಕತಹ ಕಾಲದಲ್ಲಿ, ಶ್ರೀಮಂತರಿಗೊಂದು ಕಾನೂನು, ಬಡವರಿಗೆ ಇನ್ನೊಂದು ಕಾನೂನು . ಏನು ಉತ್ತರದಲ್ಲಿ ಕೊಟ್ಟಿದ್ದೀರಿ, 4 ಸಾವಿರ ಲೀಟರ್ ಶರಾಬು ಸಿಕ್ಕಿದೆ.ಮತ್ತು ಸರ್ಕಾರದಲ್ಲಿ ಸಮಾನಾಂತರವಾಗಿ ಕೆಲಸಮಾಡತಕ್ಕ ವ್ಯವಸ್ಥೆಗಳನ್ನು ನಾವು ಕಾಣುತ್ತಾ ಇದ್ದೇವೆ. ಕರ್ನಾಟಕ ಸರ್ಕಾರದ ಮುದ್ರೆ ಇರತಕ್ಕ ಸೀಲುಗಳು ಸಿಕ್ಕಿವೆ. ಇವೆಲ್ಲ ಸಿಕ್ಕಿದರೂ ಸಹ ನಾವು ಅದನ್ನು ತನಿಖೆ ಮಾಡುತ್ತೇವೆಂದು ಹೇಳಿದರೆ ಬಹುಶಃ ಶ್ರೀಮಂತರು, ಶರಾಬು ಮಾಡುತ್ತಾ ಇದ್ದಾರೆ. ಶ್ರೀಮಂತರು ಮಾತ್ರ ಆವ್ಯವಸ್ಥೆಯಲ್ಲಿ ಮಾಡುವುದಕ್ಕೆ ಲಾಯಕ್ಕೂ, ಬಡವರು ಆಗಿದ್ದರೆ ಈ ಮಾತನ್ನು ತಾವು ಹೇಳುತ್ತಿದ್ದೀರಾ? ಇದನ್ನು ತಮ್ಮ ಇಲಾಖೆಯವರು ವಶಪಡಿಸಿಕೊಂಡ ನಂತರ ತನಿಖೆ ಮಾಡಬೇಕಾಗಿತ್ತು. ಅದನ್ನು ಅಬಕಾರಿ ಇಲಾಖೆಗೆ ವರ್ಗಾಯಿಸಿ, ಅದು ಬೇಲಬಲ್ ಅಫೆನ್ಸ್, ಎಂದು ಹೇಳಿ ಅವರನ್ನು ಬಿಟ್ಟುಬಿಟ್ಟಿರತಕ್ಕಂತಹದ್ದು. ಅದೇ ಅಪರಾಧ ಮಾಡಿದವರನ್ನು ಹಿಡಿದು, ಇದನ್ನು ಯಾರಪ್ಪ ಮಾಡಿದದ್ದು ? ಅಂತ ಕೇಳಿ ಅವರ ಮನೆಯ ಕೆಲಸದವನ ಮೇಲೆ ಕೇಸು ದಾಖಲು ಮಾಡತಕ್ಕ ವ್ಯವಸ್ಥೆಯನ್ನು ಬದಲಾವಣೆ ಮಾಡದಿದ್ದರೆ ಈ ರೀತಿಯ ಪ್ರಶ್ನೆಗಳಿಗೆ ಉತ್ತರ ಸಿಕ್ಕುವುದಿಲ್ಲ. ಈಗ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇದರ ಹಿಂದೆ ಒಂದು ಜಾಲ ಇದೆ. ಏನು ಆ ಪರಿಸರದಲ್ಲಿ ಶರಾಬನ್ನು ತಯಾರು ಮಾಡತಕ್ಕಂತಹದ್ದು. ಅದನ್ನು ಪ್ಲಾಸ್ಟಿಕ್ ಬಕೆಟ್‌ನಲ್ಲಿ

ಮಾಡತಕ್ಕಂತಹದ್ದು, ಅಂಗಡಿ ಅಂಗಡಿಗಳಲ್ಲಿ ಅದನ್ನು ಮಾರಾಟ ಮಾಡತಕ್ಕಂತಹದ್ದು, ಸರ್ಕಾರದ ಶೀಲುಗಳನ್ನು ಹೊಂದಿ ಅವುಗಳ ವ್ಯವಸ್ಥಿತವಾಗಿ ಮಾರಾಟವಾಗುತ್ತಿದೆ. ಈ ವಿಚಾರದಲ್ಲಿ ಅಲ್ಲಿನ ಡಿ. ಎಫ್.ಒ. ರವರಿಗೆ ಜೆಪ್ಸಿ ಜೀಪ್ ಸಿಕ್ಕಿದೆ. ಅದರಲ್ಲಿ 6 ಸಾವಿರ ಪ್ಯಾಕೆಟ್‌ಗಳು ಇತ್ತು ಅನಂತರ ಮತ್ತೊಂದು ಟ್ಯಾಂಕರ್‌ಸಿಕ್ಕಿದೆ. ಈ ಎಲ್ಲಾ ವ್ಯವಸ್ಥಿತವಾಗಿರತಕ್ಕ ವಸ್ತುಗಳು ಸಿಕ್ಕಿದ್ದರೂ ಸಹ ಇದು ಎಲ್ಲಿ ಆಗುತ್ತಾ ಇದೆ? ಅವುಗಳನ್ನು ಏಕೆ ತನಿಖೆ ಮಾಡಬಾರದು ಎನ್ನತಕ್ಕ ವಿಚಾರದಲ್ಲಿ ಯಾರೂ ಸಕ್ರೀಯವಾಗಿ ಕೆಲಸ ಮಾಡಿಲ್ಲ. ಆದ್ದರಿಂದ ಸನ್ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೆ. ಇದು ಯಾವಾಗ ಪ್ರಾರಂಭವಾಯಿತು? ಯಾರು ಈ ಯಂತ್ರಗಳನ್ನು ಖರೀದಿ ಮಾಡಿದರು? ಯಾರು ಈ ವ್ಯವಸ್ಥೆಗಳನ್ನು ಮಾಡುತ್ತಾ ಇದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ, ಸಿ.ಓ. ಡಿ. ವಿಚಾರಣೆಯನ್ನು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಅಬಕಾರಿ ಇಲಾಖೆಗೆ ಕೊಟ್ಟರೆ ಖಂಡಿತ ಇದನ್ನೆಲ್ಲಾ ಮತ್ತೆ ಮುಚ್ಚಿ ಹಾಕುತ್ತಾರೆ. ಇಷ್ಟೆಲ್ಲಾ ಹಗರಣ ಆಗಿದ್ದರೂ ಸಹ ಅವರ ಹತ್ತಿರ ಕೇಳಿ ಯಾರಪ್ಪ ಮಾಡಿದವರು ಅಂತ ಕೇಳಿ ಕೇಸು ದಾಖಲು ಮಾಡತಕ್ಕ ಪರಿಸ್ಥಿತಿಗೆ ಬಂದಿದೆ. ಆದ್ದರಿಂದ ತಾವು ಅದರಲ್ಲಿ ಪ್ರಮುಖ ಪಾತ್ರ ವಹಿಸಿ ತಮ್ಮ ಇಲಾಖೆ ವತಿಯಿಂದ ಸಿ.ಓ.ಡಿ. ತನಿಖೆ ಮಾಡಿಸಿ ಇದರ ಸಂಪೂರ್ಣ ವಿಚಾರವನ್ನು ಬೆಳಕಿಗೆ ತರಬೇಕು, ಈ ಬಗ್ಗೆ ಬೆಳಕನ್ನು ಚೆಲ್ಲಬೇಕು ಎನ್ನತಕ್ಕ ಮಾತನ್ನು ತಮ್ಮ ಮೂಲಕ ಮಾನ್ಯ ಗೃಹ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ವಿಚಾರದಲ್ಲಿ ಹೇಳುವುದಾದರೆ, ಮೂಲತಃ ಇದು ಅಬಕಾರಿ ಇಲಾಖೆಗೆ ಸಂಬಂಧಪಟ್ಟದ್ದುದು. ನನ್ನ ಇಲಾಖೆಗೆ ಬರತಕ್ಕಂತಹದ್ದು ಅಲ್ಲ.ಅಬಕಾರಿ ಇಲಾಖೆಯವರು ರೇಡ್ ಮಾಡತಕ್ಕ ಸಂದರ್ಭದಲ್ಲಿ ಪೋಲೀಸ್ ಇಲಾಖೆಯವರು ಅವರಿಗೆ ಬೇಕಾಗಿರತಕ್ಕ ರಕ್ಷಣೆಯನ್ನು ಕೊಟ್ಟು ಈ ಒಂದು ರೇಡನ್ನು ಕಂಡಕ್ಟ್ ಮಾಡುವುದಕ್ಕೆ ಸಹಾಯ ಮಾಡಿದ್ದಾರೆ. ಈಗ ದಸ್ತಗಿರಿ ಮಾಡಿದವರ ಬಗ್ಗೆ ಬೇಕಾದರೆ ಈ ಪ್ರಕರಣದ ಹಿಂದೆ ಯಾರು ಇದ್ದಾರೆ? ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದರಲ್ಲಿ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ನಾನು ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ಕೆಗೆದುಕೊಳ್ಳತಕ್ಕಂತಹ ಭರವಸೆಯನ್ನು ಕೊಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಕಳ್ಳ ಟಿಕೆಟ್‌ಗಳನ್ನು ಮಾರಾಟ ಮಾಡಿದಂತಹ ಸಂದರ್ಭದಲ್ಲಿ ಏನು ಮಾಡಿದ್ದೀರಿ? ಸಿ.ಓ.ಡಿ. ತನಿಖೆ ಮಾಡಿದ್ದೀರಿ. ಈ ವಿಚಾರದಲ್ಲಿ ಕಳ್ಳ ವ್ಯವಸ್ಥೆಯೊಳಗೆ ಅಬಕಾರಿ ಸ್ವತ್ತನ್ನು ಲೂಟಿ ಹೊಡೆಯುತ್ತಾ ಇದ್ದಾರೆ. ಸರ್ಕಾರಿ ಮುದ್ರೆ ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದಾರೆ. ಇಂತಹದ್ದರ ಬಗ್ಗೆ ಏಕೆ ಸಿ. ಓ.ಡಿ. ತನಿಖೆ ಮಾಡಬಾರದು? ಅಬಕಾರಿ ಇಲಾಖೆಯಲ್ಲಿ ತಮ್ಮ ಇಲಾಖೆಯವರು ಸಹಾಯ ಮಾಡಿರುವುದರಿಂದ, ಕೇಸನ್ನುದಾಖಲು ಮಾಡುವ ಅಧಿಕಾರದ ವ್ಯವಸ್ಥೆ ತಮ್ಮಲ್ಲಿರುವುದರಿಂದ ಅಬಕಾರಿ ಇಲಾಖೆಯವರು ಕೊಡುವುದಿಲ್ಲ ಎನ್ನುವ ಮಾತನ್ನು ಹೇಳದೆ ಈ ವಿಚಾರ ತಮ್ಮ ಗಮನಕ್ಕೆ ಬಂದಿದೆ. ಗುರುತರವಾದ ಆರೋಪಗಳು ಇವೆ. ಇವುಗಳನ್ನು ಪರಿಶೀಲನೆ ಮಾಡಿ, ಸಿ.ಓ.ಡಿ.ಗೆ ತಾವು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಸಿ.ಓ.ಡಿ.ಗೆ ಬೇಡ ನಾನೇ ಮಾಡುತ್ತೇನೆ ಎಂದು ಹೇಳಿ

ಪಿ.ಜಿ.ಆರ್. ಸಿಂಧ್ಯ : ಎಲ್ಲವನ್ನೂ ಸಿ.ಓ.ಡಿ.ಗೆ ಕೊಟ್ಟುಬಿಟ್ಟರೆ, ರೆಗ್ಯೂಲರ್ ಪೋಲೀಸ್‌ಗೆ ಏನು ಕೆಲಸ ಇರತಕ್ಕ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ, ತಪ್ಪು ಮಾಡಿದ್ದಾರೆ, ಅವರಿಗೇನೋ ಇಂಟ್ರೆಸ್ಟ್ ಇದೆ, ಅಂತ ಅನಿಸಿದರೆ, ಅವಾಗ ಬೇರೆಯವರಿಗೆ ಕೊಡಬಹುದು. ಸಿ.ಓ.ಡಿ. ಅಂದ ತಕ್ಷಣ ಅವರೂ ನಮ್ಮ ಪೋಲೀಸ್‌ನವರೆ. ಅದರಿಂದ

ನಾನು ಅವರಿಗೆ ಭರವಸೆ ಕೊಟ್ಟಿದ್ದೇನೆ. ಇದರ ಬಗ್ಗೆ ನನಗೆ ಏನಾದರೂ ವಾಸನೆ ಬಂದರೆ ಇದರಲ್ಲಿ ಏನೋ ಇದೆ ಎಂದು ನನಗೆ ಕನ್ವಿನ್ಸ್ ಆದರೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಸರ್ಕಾರಕ್ಕೆ ಈ ವಿಷಯದ ಬಗ್ಗೆ ತನಿಖೆ ಮಾಡಲಿಕ್ಕೆ, ಕ್ರಮ ತೆಗೆದುಕೊಳ್ಳಲಿಕ್ಕೆ ಆಸಕ್ತಿ ಇಲ್ಲ ಅಂತ ಹೇಳಿಯೇ ಇದನ್ನು ಉನ್ನತ ಮೂಲಗಳಿಂದ ತನಿಖೆ ಮಾಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಕಾರಣ ಸರ್ಕಾರಕ್ಕೆ ಮತ್ತು ಇಲಾಖೆಗೆ ಪರ್ಯಾಯವಾಗಿ, ಸಮಾನಾಂತರವಾಗಿ ಬೇರೆ ವ್ಯವಸ್ಥೆ ಇಟ್ಟುಕೊಂಡು ಮಿಷನ್ ಇಟ್ಟುಕೊಂಡು, ಪ್ಯಾಕೆಟ್‌ಗಳನ್ನು ಮಾಡತಕ್ಕ ವ್ಯವಸ್ಥೆಯ ಬಗ್ಗೆ ದೂರು ಕೊಟ್ಟ ಮೇಲೆ ಹೋಗಿ ಕಂಡು ಹಿಡಿದಿದ್ದಾರೆ. ಅದೂ ಕೂಡ ಎಲ್ಲಿ ಅದನ್ನು ಮಾಡುತ್ತಿದ್ದಾರೆ? ಒಂದು ಪಂಪ್ ಹೌಸ್‌ನಲ್ಲಿ ಎಂಬುದಾಗಿ ಸನ್ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ತದನಂತರ ಹೇಳಿದರು, ಪಂಪ್‌ಹೌಸನ್ನು ಬಾಡಿಗೆಗೆ ಕೊಟ್ಟಿದ್ದಾರೆಂದರೆ ಅದನ್ನು ಒಪ್ಪಲಿಕ್ಕೆ ಸಾಧ್ಯವಿದೆಯೇ? ಎಲ್ಲಿ ಮಾಡುತ್ತಿದ್ದರು ಅಂದರೆ ಪಂಪ್‌ಹೌಸ್‌ನಲ್ಲಿ ಮಾಡುತ್ತಿದ್ದರು ಎಂದು ಉತ್ತರ ಬಂತು. ಈ ಪಂಪ್‌ಹೌಸನ್ನು ಬಾಡಿಗೆಗೆ ಕೊಟ್ಟಿದ್ದೇನೆಂದು ಮನೆ ಮಾಲೀಕರು ಹೇಳುತ್ತಿದ್ದಾರೆನ್ನುವ ಮಾತು ಒಪ್ಪತಕ್ಕದ್ದಲ್ಲ. ಈಗ ಚುನಾವಣೆಯಾದ ಮೇಲೆ ಈ ಸರ್ಕಾರ ಮದ್ಯದ ದೊರೆಗಳಿಗೆ ಮಣಿದು ಆಡಳಿತ ನಡೆಸುತ್ತಿದ್ದೆಯೆಂದು ಅನಿವಾರ್ಯವಾಗಿ ಈ ಮಾತನ್ನು ಹೇಳಬೇಕಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಗಮನಹರಿಸಬೇಕು. ಏಕೆಂದರೆ ಶರಾಬು ಮಾಡತಕ್ಕ ಮೆಷಿನ್ ಪ್ಲಾಸ್ಟಿಕ್ ಸ್ಯಾಚೆಟ್ ಫಿಲಂ ರೀಲ್ಸ್ ಇವೆಲ್ಲ ಸಿಕ್ಕಿದರೂ ಇನ್ನೂ ಕೂಡ ಕ್ರಮ ತೆಗೆದುಕೊಳ್ಳದೆ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಬೇಕು. ಹಗಲು ದರೋಡೆ ಮಾಡುವವರನ್ನು ಇವರು ಹಿಡಿಯದಿದ್ದರೆ ರಾತ್ರಿ ದರೋಡೆ ಮಾಡುವವರನ್ನು ಹೇಗೆ ಹಿಡಿಯುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯಅಧ್ಯಕ್ಷರೆ, ಈಗ ಯಾವ ಸರ್ಕಾರ ಹೆಂಡದ ದೊರೆಗಳ ಜೊತೆ ಸೇರಿಕೊಂಡಿದೆ ಎಂದು ಈ ರೀತಿ ಆಪಾದನೆ ಮಾಡುವಾಗ...

ಅಧ್ಯಕ್ಷರು: ಆಪಾದನೆ ಮಾಡಿದ್ದದು ಈಗ, ಮೂರು ತಿಂಗಳಿಂದ ಇಲ್ಲ ಮೊದಲಿನಿಂದಲೂ ಇತ್ತೆಂದು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗೆ ಹೇಳುವುದಲ್ಲ, ನಮ್ಮ ಇಲಾಖೆಯವರು ಇದನ್ನು ರೇಡ್‌ಮಾಡಿರತಕ್ಕದ್ದು. ಹಲವಾರು ವರ್ಷಗಳಿಂದ ನಡೆಯುತ್ತಿತ್ತು ಇದು. ಸ್ಯಾಚೆಟ್ ಬ್ಯಾಗು ಸಹಿತ ಇಲ್ಲಿದೆ. ನಾವು ನಿದ್ದೆ ಮಾಡಿಕೊಂಡು ಕುಳಿತುಕೊಂಡಿಲ್ಲ ಸ್ವಾಮಿ. ಸರ್ಕಾರ ಕ್ರಮ ತೆಗೆದುಕೊಂಡಿದೆ. ಹೆಂಡದ ದೊರೆಗಳ ಜೊತೆಗೆ ಸೇರಿಕೊಂಡಿದ್ದೇವೆಂದರೇನು?

ಶ್ರೀ ಬೈರೇಗೌಡ : ಅವರ ಯೋಗ್ಯತೆಯಲ್ಲ ಗೊತ್ತಿದೆ. ಯಾವಾಗ ಏನೇನು ನಡೆಯುತ್ತಿತ್ತು? ಏನೇನು ನಡೆದಿದೆ ಎನ್ನುವುದನ್ನು ಹೇಳಬೇಕೇ?

ಶ್ರೀ ಎ.ಟಿ. ರಾಮಸ್ವಾಮಿ : ಹೇಳಿ ಸ್ವಾಮಿ?

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಹೇಳುತ್ತೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮತೆಗೆದುಕೊಳ್ಳತ್ತೇವೆಂದು ಹೇಳಿದ್ದಾರೆ. ಅದಕ್ಕಿಂತ ಮುಂದಕ್ಕೆ ಹೋಗಿ ಹೇಳಬೇಕಾದರೆ ಹಿಂದೆ ಏನೇನು ನಡೆಯುತ್ತಿತ್ತು ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ : ದಯಮಾಡಿ ಹೇಳಿ ಕ್ರಮ ತೆಗೆದುಕೊಳ್ಳಿ, ಏಕೆ ಮುಚ್ಚಿಡುತ್ತೀರಿ?

(ಗೊಂದಲ)

ಶ್ರೀ ಕಾಗೋಡುತಿಮ್ಮಪ್ಪ : ಹೇಳುವುದು ಬೇಡವೆಂದು ಯಾರು ಹೇಳಿದ್ದಾರೆ ಹೇಳಿ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ **ಅಧ್ಯಕ್ಷರೆ,** ನನಗೆ ಒಂದು **ಸಂಶಯ**ವಿದೆ, ರಾಮಸ್ವಮಿಯವರು ಕೇಳುತ್ತಿದ್ದಾರೆ ಗೃಹಮಂತ್ರಿಗಳು **ಉತ್ತರ** ಕೊಡುತ್ತಿದ್ದಾರೆ. **ಇನ್ನೊಬ್ಬರು** ಅವರ ಇಲಾಖೆಗೆ ಸಂಬಂಧಪಟ್ಟಹಾಗೆ ಉತ್ತರ ಕೊಡುತ್ತಿದ್ದಾರೆ. ನನಗೆ ಅನುಮಾನ ಬಂದಿದೆ, ಇಲ್ಲಿ ಗೃಹಸಚಿವರು ಇಬ್ಬರೂ ಒಬ್ಬರೂ ಎಂದು, ಒಬ್ಬರಾದರೆ ಮಾನ್ಯ ಸಿಂಧ್ಯಾರವರು ಉತ್ತರ ಹೇಳಲಿ. ಬೈರೇಗೌಡರು ಮತ್ತು ಸಿಂಧ್ಯಾರವರು ಇಬ್ಬರು ಗೃಹಮಂತ್ರಿಗಳಿದ್ದಾರೆಂದರೆ ಪೋಲೀಸ್ ಇಲಾಖೆಯನ್ನು ನಾನು ನೋಡಿಕೊಳ್ಳುತ್ತೇನೆ ಸಿಓಡಿಯನ್ನು ಅವರು ನೋಡಿಕೊಳ್ಳುತ್ತಾರೆಂದು ಅವರು ಏನಾದರೂ ಹೇಳಲಿ. ಅವರು ಕೇಳಿದ ತಕ್ಷಣ ಇವರು ಎದ್ದು ಉತ್ತರ ಕೊಡುವುದಕ್ಕೆಕ ಹೊರಟರೆ ನಮ್ಮ ಪರಿಸ್ಥಿತಿಯೇನು? ಜಂಟಿ ಹೊಣೆಗಾರಿಕೆಯೆಂದು ಮಾನ್ಯ ಪ್ರಕಾಶ್‌ರವರು ಹೇಳುತ್ತಿದ್ದಾರೆ. ಹಾಗಾದರೆ ಎಲ್ಲರೂ ಒಟ್ಟಿಗೆ ಎದ್ದು ನಿಂತುಕೊಳ್ಳಿ. ಸರ್ಕಾರದ ಮೇಲೆ ಆಪಾದನೆ ಮಾಡಿದರೆ ನೀವು ಅದಕ್ಕೆ ಹೊಣೆಗಾರರೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ರಾಮಸ್ವಾಮಿಯವರು ಮಾತನಾಡಿದಾಗ ವಾಟಾಳ್‌ನಾಗರಾಜ್‌ರವರು ಅವರಿಗೆ ಪೂರಕವಾಗಿ ಸಹಾಯಕರಾಗಿ ಎದ್ದುನಿಂತು ಪ್ರತಿಪಾದಿಸಿದಂತೆ ಗೃಹಮಂತ್ರಿಗಳ ಪ್ರತಿಪಾದನೆಗೆ ಪೂರಕವಾಗಿ ಒಂದು ಸಲಹೆಯನ್ನು ಮಾನ್ಯ ಬೈರೇಗೌಡರು ಕೊಟ್ಟರೇ ವಿನಹ ಅವರೇನು ಎರಡನೆಯ ಗೃಹಮಂತ್ರಿಗಳಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಜಂಟಿ ಹೊಣೆಗಾರಿಕೆ ಇಲ್ಲ.

ಅಧ್ಯಕ್ಷರು : ಮಾನ್ಯಸಚಿವರಾದ ಪ್ರಕಾಶ್‌ರವರ ವಾದವನ್ನು ನಾವು ಒಪ್ಪಿದ್ದೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಸಂಪುಟ ಸದಸ್ಯರಿಗೆ ಜಂಟಿ ಹೊಣೆಗಾರಿಕೆ ಎಲ್ಲರಿಗೂ ಇರುತ್ತದೆ. ಪೋಲೀಸ್ ಬಗ್ಗೆ ಅವರು ಹೇಳಿದ್ದಾರೆ. ಅಬಕಾರಿ ಮಂತ್ರಿಗಳೂ ಸಹ ಇಲ್ಲಿಯೇ ಇದ್ದಾರೆ. ಅಬಕಾರಿ ಬಗ್ಗೆ ಅವರು ಹೇಳುವುದಕ್ಕೆ ಉರುಳಿಲ್ಲ. ಆದರೆ ಅದನ್ನು ಬಂಡವಾಳ ಮಾಡಿಕೊಂಡು ಸರ್ಕಾರದ ಮೇಲೆ ಅಬಕಾರಿ ಹೊರೆಗಳಿಗೆ ಶಾಮೀಲಾಗಿದ್ದಾರೆ ಎನ್ನತಕ್ಕ ಆಪಾದನೆ ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಯಾರ್ಯಾರು ಯಾವ್ಯಾವ ಕಾಲದಲ್ಲಿ ಯಾವ್ಯಾವ ರೀತಿ ಶಾಮೀಲಾಗಿದ್ದರು ಎನ್ನುವುದನ್ನು ಅಂತಹ ಸಂದರ್ಭ ಬಂದಾಗ ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಬಕಾರಿ ವಿಚಾರ ಬಂದಾಗ ಅದಕ್ಕೆ ಸಂಬಂಧಪಟ್ಟ ಸಚಿವರು ಮಾತ್ರ ಉತ್ತರ ಹೇಳುತ್ತಾರೆ. ಮಾನ್ಯ ಬೈರೇಗೌಡರು ಇಲ್ಲಿರುವಾಗ ಹೇಳುತ್ತೇನೆ ಅವರು ಎಷ್ಟು ಸಾರಿ ನಿಂತುಕೊಂಡರು, ಅಬಕಾರಿಯ ಬಗ್ಗೆ ಅವರಿಗೆ ವ್ಯಾಮೋಹವಿದೆ. ಆ ಇಲಾಖೆಗೆ ಬರಬೇಕೆನ್ನುವ ವ್ಯಾಮೋಹವಿದೆ. ಆ ವ್ಯಾಮೋಹದ ಚಿಂತನೆಯಲ್ಲಿದ್ದಾರೆ. ಇಲ್ಲಿ ಕುಳಿತಾಗ ಅದರ ಬಗ್ಗೆ ಮಾತನಾಡಿ ತಮ್ಮ ಇಡೀ ಕಾಲವನ್ನು ಅತ್ಯಂತ ಅಮೂಲ್ಯವಾದ ಕಾಲವನ್ನು ಇಲ್ಲಿ ವ್ಯಯ ಮಾಡಿದ್ದಾರೆ. ನನಗನಿಸುತ್ತದೆ ಅವರಿಗೆ ಕೃಷಿ ಇಲಾಖೆ ಬಿಟ್ಟು ಅಬಕಾರಿ ಇಲಾಖೆ ಕೊಡುವುದಾದರೆ ನಾವೆಲ್ಲ ಸಹಕಾರ ಮಾಡುತ್ತೇವೆ. ದಯವಿಟ್ಟು ಅದನ್ನು ತೆಗೆದುಕೊಳ್ಳಿ ನಮ್ಮ ಅಭ್ಯಂತರವಿಲ್ಲ. ಅವರಿಗೆ ನೀವು ಅದನ್ನು ಕೊಡಲೇಬೇಕು, ಕೊಡಬೇಕು ಸ್ವಾಮಿ.

ಶ್ರೀ ಕಾಗೋಡುತಿಮ್ಮಪ್ಪ : ಈ ಸದನದಲ್ಲಿ ಹೇಳಿದ್ದಾರೆ. ಪ್ರತಿ ದಿವಸಕ್ಕೆ 200 ಕೋಟಿ ರೂಪಾಯಿಗಳನ್ನು ನಾನು ಕೊಡಿಸಿಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ಅವರಿಗೆ ಅಬಕಾರಿ ಇಲಾಖೆಯನ್ನು ಕೊಡಬೇಕು.

ಶ್ರೀ ಬೈರೇಗೌಡ : ಆ ತರಹ ಉತ್ಪ್ರೇಕ್ಷೆ ಮಾಡಿ ಹೇಳಿದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. 200ಕೋಟಿ ರೂಪಾಯಿ ಪ್ರತಿ ದಿವಸಕ್ಕೆ ಎಂದು ಹೇಳಿಲ್ಲ. ಪ್ರತಿದಿವಸ 1 ಕೋಟಿ ರೂಪಾಯಿ ಇದರಲ್ಲಿ ಸೋರಿಹೋಗುತ್ತಿದೆ ಎಂದು ಈ ಸದನದಲ್ಲಿ ಹೇಳಿರತಕ್ಕದ್ದು ನಿಜ. ಸರ್ಕಾರ ಬದಲಾವಣೆ ಯಾದಾಗ ಅದು ನಿಜವೆಂದು ಅಂಕಿಅಂಶಗಳಿಂದ ಸಹ ಸಾಬೀತು ಆಗಿದೆ. ಅದನ್ನು ಮಾನ್ಯ ಕಾಗೋಡುತಿಮ್ಮಪ್ಪನವರು ಮರೆತು 200 ಕೋಟಿ ರೂಪಾಯಿ ಅಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : 1ಕೋಟಿ ರೂಪಾಯಿ ಸೋರಿ ಹೋಗುವುದನ್ನು ತಾವು ನಿಲ್ಲಿಸಿದ್ದೀರಾ?

ಶ್ರೀ ಬಿ. ಶಿವರಾಂ : ಹೋದ ಸಾರಿಗಿಂತ ಅಬಕಾರಿಯಲ್ಲಿ 365 ಕೋಟಿ ರೂಪಾಯಿ ಜಾಸ್ತಿಯಾಗಬೇಕಾಗಿತ್ತು ಅದು ಆಗಿದೆಯೆ?

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಗಮನಸೆಳೆಯುವ ಸೂಚನೆಯಲ್ಲಿ ಹೀಗೆ ಆದರೆ ಹೇಗೆ?

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹಿಂದಿನದೆಲ್ಲವನ್ನು ಬಿಚ್ಚಬೇಕಾಗುತ್ತದೆಂದು ಹೇಳಿದರು. ಈ ರಾಜ್ಯದ ಜನತೆ ಒಳ್ಳೆಯ ಆಡಳಿತವನ್ನು ಕೊಡಲಿಯೆಂದು ನಿರೀಕ್ಷೆಮಾಡಿ ಅವರನ್ನು ಅಲ್ಲಿಗೆ ತಂದಿದ್ದಾರೆ. ಅದನ್ನೆಲ್ಲ ಬಿಚ್ಚಬೇಕು ಅದನ್ನು ಸರಿಕಪಡಿಸಬೇಕು.

ನಕಲಿ ಪ್ಯಾಕೆಟ್‌ಗಳು ಆಗುತ್ತಿವೆ ಅದನ್ನು ತಡೆಗಟ್ಟುವುದಕ್ಕೆ ನೀವು ಕ್ರಮವನ್ನು ತೆಗೆದುಕೊಳ್ಳಿಯೆಂದು ಹೇಳುತ್ತಿದ್ದೇನೆ. ಅದನ್ನು ತಡೆಗಟ್ಟುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಪಂಪ್‌ಹೌಸನ್ನು ಯಾರೂ ಬಾಡಿಗೆಗೆ ಕೊಡುವುದಿಲ್ಲ. ಪಂಪ್‌ಹೌಸನ್ನ ಬಾಡಿಗೆಗೆ ಕೊಟ್ಟು ಅಲ್ಲಿ ಪ್ಯಾಕೆಟ್‌ಗಳು ತಯಾರಾಗುತ್ತಿವೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ದಿಕ್ಕಿನಲ್ಲಿ ನಿಮ್ಮ ಕೈಯಲ್ಲಿ ಒಳ್ಳೆಯ ತನಿಖೆಯಾಗುತ್ತದೆನ್ನುವ ನಿರೀಕ್ಷೆ ವೈಯಕ್ತಿಕವಾಗಿ ನನಗಂತೂ ಇಲ್ಲ. ಬೇರೆಯವರಿಗೆ ಇರಬಹುದು. ಅದಕ್ಕಾಗಿ ಉನ್ನತಮಟ್ಟದ ತನಿಖೆ ಮಾಡಬೇಕು ಅದನ್ನು ತಹಬಂದಿಗೆ ತರಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ,

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಿದೆ? ಇದೇ ಶರಾಬು ಏನಾದರೂ ಬಡವರ ಹತ್ತಿರ ಸಿಕ್ಕಿದ್ದರೆ ಅವರನ್ನು ಒಳಗಡೆ ಇಡುತ್ತಿದ್ದಿರಿ. ಇದು ಕಳ್ಳಬಟ್ಟಿ ಇದರ ಬಗ್ಗೆ ತನಿಖೆಯಾಗಬೇಕು. ಲಕ್ಷಾಂತರ ರೂಪಾಯಿ ವ್ಯವಹಾರವನ್ನು ಮಾಡತಕ್ಕ ವ್ಯವಸ್ಥಿತ ಜಾಲವಿದೆ. ಇದು ಅವರದು ಇವರರು ಎನ್ನುವ ಪ್ರಶ್ನೆಯಲ್ಲಿ ನಿಮ್ಮ ಪೋಲೀಸರು ಇರುವುದರಿಂದ ಕೇಳುತ್ತಿದ್ದೇನೆ, ತಮಗೆ ಇದನ್ನು ಸಿಓಡಿ ತನಿಖೆ ಮಾಡಲಿಕ್ಕೆ ಸಾಧ್ಯವೇ? ಇದು ಎಷ್ಟು ಸಮಯದಿಂದ ಆಗುತ್ತಿದೆ? ಯಾರು ಇದರಲ್ಲಿ ನಿಜವಾಗಿ ಪಾಲುದಾರರು? ಇದು ಯಾವ್ಯಾವ ಕಡೆಗಳಲ್ಲಿ ಮಾರಾಟವಾಗುತ್ತಿದೆ? ಆ ಫಿಲಂ ಹೇಗೆ ಬಂತು? ಮೆಷಿನ್ ಯಾವರೀತಿ ಬಂತು ಇದನ್ನು ತನಿಖೆ ಮಾಡುವುದು ಬೇಡವೇ? ಅದಕ್ಕೆ ನಾನು ಕೆಳುತ್ತಿರುವುದು ನಾನು ಬಹಳಷ್ಟು ನಿರೀಕ್ಷೆ ಮಾಡುತ್ತಿಲ್ಲ. ತಾವು ಸಿಓಡಿ ತನಿಖೆ ಮಾಡಿ ಇದರ ಹಿಂದಿರತಕ್ಕ ಜಾಲವನ್ನು ಬಯಲಿಗೆ ಎಳೆಯಿರಿ ಎನ್ನತಕ್ಕ ಮನವಿಯನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಬಿ. ಶಿವರಾಂ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸರ್ಕಾರದ ಗಮನಸೆಳೆದು ಸಾಕಷ್ಟು ಚರ್ಚೆಯಾಗಿದೆ. ಒಟ್ಟಾರೆ ಸಿಓಡಿ ತನಿಖೆ ಮಾಡಿಯೆಂದು ಕೇಳುತ್ತಿದ್ದೇನೆ. ಗೃಹಮಂತ್ರಿಗಳು ಏನು ಹೇಳುತ್ತಾರೆಂದರೆ ಅಲ್ಲಿರುವವರು ಪೋಲೀಸರೇ ಎಂದು, ಹಾಗಾದರೆ ಸಿಓಡಿ ಇಲಾಖೆ ಏಕೆ? ಆ ಕೆಲಸವನ್ನು ನಿರ್ವಹಿಸಲಿಕ್ಕೆ ವ್ಯವಸ್ಥೆಯಿಲ್ಲವೇ? ಸಿಓಡಿ ದಕ್ಷತೆ ಇಲ್ಲ ನಮ್ಮ ಪೋಲೀಸರಿಗೆ ನಾವು ಕೇಳುತ್ತೇವೆಂದರೆ, ಬೇರೆ ವಿಶೇಷವಾದ ಏನಾದರೂ ಇನ್ನೊಂದು ಇಲಾಖೆಯಿದ್ದರೆ ಆ ಮೂಲಕ ವಿಚಾರಣೆ ಮಾಡಿಸಿ, ಈಗಿರತಕ್ಕ ಪೋಲೀಸರ ಮೇಲೆ ನಂಬಿಕೆ ಇಲ್ಲ ಎನ್ನತಕ್ಕ ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ. ಇಷ್ಟು ದಿವಸಗಳಾದರೂ ನಿಷ್ಪಕ್ಷಪಾತವಾದ ವಿಚಾರಣೆಯಾಗಿಲ್ಲ. ಸಿಓಡಿ ಮೂಲಕ ವಿಚಾರಣೆ ಮಾಡಿಸಬೇಕು. ಇಲ್ಲದಿದ್ದರೆ ಬೇರೆ ಮಾರ್ಗದ ಮೂಲಕ ವಿಚಾರಣೆ ಮಾಡಿಸಿ.

ಅಧ್ಯಕ್ಷರು : ಮಾನ್ಯ ಸದಸ್ಯರ ಮಾತಿನ ಅರ್ಥ ಇಷ್ಟೆ. ಯಾರಾದರೂ ಸಣ್ಣಪುಟ್ಟ ಕಳ್ಳಬಟ್ಟಿ ಮಾಡಿದರೆ ಬಹಳ ದುಭಾರಿ ಮಾಡುತ್ತೀರಿ, ಇಷ್ಟೆಲ್ಲ ವ್ಯವಸ್ಥಿತವಾಗಿ ಮಾಡಬೇಕಾದರೆ ಇದರ ಹಿಂದೆ ದೊಡ್ಡವರು ಪ್ರಭಾವಶಾಲಿಗಳು ಇರುತ್ತಾರೆ. ಮಾಮೂಲಿ ಎನ್‌ಕ್ವಾಯಿರಿ ಮಾಡಿದರೆ ಸರಿಯಾಗುವುದಿಲ್ಲ ಸಿಓಡಿ ಒಪ್ಪಿಸಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಇದನ್ನು ಸಿಓಡಿಗೆ ಕೊಡಲಿಕ್ಕೆ ನನ್ನದು ತಕರಾರು ಇಲ್ಲ. ರೆಗ್ಯುಲರ್ ಪೋಲೀಸರಿಗೆ ತನಿಖೆ ಮಾಡಿಸಿವುದಕ್ಕೆ ಸಹ ನನಗೆ ತಕರಾರು ಇಲ್ಲ.

ಮಾನ್ಯ ಸದಸ್ಯರು ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಲುಕ್ಸಾನು ಆಗತಕ್ಕದ್ದನ್ನು ಅಥವಾ ಕುಡಿಯತಕ್ಕ ಜನಗಳಿಗೆ ಒಳ್ಳೆಯ ಶರಾಬು ಕೊಡುವ ದೃಷ್ಟಿಯಿಂದ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದಿರುವುದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾವುದೇ ಇಲಾಖೆ ಇರಲಿ ಪೋಲೀಸರು ಹೋಗಿ ರೈಡ್ ಮಾಡಿದ್ದಾರೆ, ಲಕ್ಷಾಂತರ ರೂಪಾಯಿ ಮಾಲನ್ನು ಹಿಡಿದಿದ್ದಾರೆ ಇದರಲ್ಲಿ ಅವರುಗಳ ಇನ್‌ವಾಲ್ವ್‌ಮೆಂಟ್ ಇದೆಯೇ? ಅವರಿಗೆ ಇನ್‌ಫರಮೇಶನ್ ಬಂದ ತಕ್ಷಣ ರೈಡ್ ಮಾಡಲಿಲ್ಲವೆ? ಅಥವಾ ಮುಚ್ಚಿವುವುದರಲ್ಲಿ ಏನಾದರೂ ಶಾಮೀಲಾಗಿದ್ದಾರೆ ಎನ್ನತಕ್ಕಂಥ ಅಪಾದನೆಗಳು ಇದ್ದರೆ, ಬೇರೆ ಅಧಿಕಾರಿಗಳಿಗೆ ಹೇಳಬೇಕಾಗಿತ್ತು. ಈಗ ಹೇಳುತ್ತಿದ್ದಾರೆ ಆ ಅಧಿಕಾರಿಗಳ ಬಗ್ಗೆ ವಿಶ್ವಾಸ ಇಲ್ಲ ಆದ್ದರಿಂದ ನಾನು ಭರವಸೆ ಕೊಡುತ್ತೇನೆ. ಉನ್ನತ ಅಧಿಕಾರಿಗಳಿಂದ ಇದರ [illegible] ನಾನು ಪರಿಶೀಲನೆ ಮಾಡಿ ಇದರ ಹಿಂದೆ ಯಾರು ಇದ್ದಾರೆ, ಯಾವ ಶಕ್ತಿಗಳು ಇದ್ದಾರೆ, ಇದನ್ನೆಲ್ಲ ಕೂಲಂಕುಷವಾಗಿ ವಿಚಾರಣೆ ಮಾಡಿ ಈ ಸದನಕ್ಕೆ ತಿಳಿಸುತ್ತೇನೆ.

ಶ್ರೀ ಗಂಧದ ಬೆಲೆಯನ್ನು ಏರಿಸಿರುವುದರಿಂದ ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿಗೆ ತೀವ್ರ ಧಕ್ಕೆ.

ಶ್ರೀ ಎನ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಶ್ರೀಗಂಧದ ಬೆಲೆಯನ್ನು ಏರಿಸಿವುದರಿಂದ ಹಾಗೂ ಪೂರ್ಣಾವಧಿ ಅಧ್ಯಕ್ಷರನ್ನು ನೇಮಕ ಮಾಡದಿರುವುದರಿಂದ ಕರ್ನಾಟಕ ಸೋಪ್ಸ್‌ಅಂಡ್ ಡಿಟರ್ಜೆಂಟ್ ತಿಮಿಟೆಡ್ ಕಾರ್ಖಾನೆಗೆ ತೀವ್ರ ಧಕ್ಕೆಯಾಗಿರುವ ಬಗ್ಗೆ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಬಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ) ಮಾನ್ಯ ಅಧ್ಯಕ್ಷರೇ , ಸರ್ಕಾರದ ತನ್ನ ಆದೇಶ ಸಂಖ್ಯೆ ಎಣಇ 40 ಎಫ್‌ಎಸ್‌ಡಬ್ಲ್ಯು 94 ದಿನಾಂಕ 13-3-95ರಲ್ಲಿ ಕ.ಎಸ್.ಡಿ.ಎಲ್ ಹಾಗೂ ಎಂ.ಎಸ್.ಐಯ.ಎಲ್. ಈ ಸಂಸ್ಥೆಗಳಿಗೆ ಸರಬರಾಜು ಮಾಡುವ ಹಾರ್ಟವುಡ್ ಮತ್ತು ಮಿಕ್ಸರ್‌ವುಡ್ ದರ್ಜೆಯ